ಹೆಚ್ಚುವರಿ ಹಿರಿಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೀದರ
**ಸಿ.ಸಿ. ನಂ. 2204/2022**

**ದಿ: 12-06-2023**
**CW-5. PW-4.**

ಸಾಕ್ಷಿಯ ಹೆಸರು : ಶಿವುರೆಡ್ಡಿ
ತಂದೆ ಹೆಸರು : ರಾಯರೆಡ್ಡಿ
ವಯಸ್ಸು : 27 ವರ್ಷ
ಉದ್ಯೋಗ : ಫೈನಾನ್ಸ್ ವ್ಯವಹಾರ,
ವಾಸಸ್ಥಳ : ಬೀದರ.

ಸಾಕ್ಷಿಯನ್ನು ಇಂದು ದಿ**: 12-06-2023** ರಂದು ಕರೆಸಿ, ಪ್ರಮಾಣಿಕರಿಸಲಾಯಿತು.

:-ಸಾಕ್ಷಿಯ ಮುಖ್ಯ ವಿಚಾರಣೆ ಹಿರಿಯ ಸಸಅ ಅವರಿಂದ:-

1. ಚಾಸಾ-1, 4 ಹಾಗೂ 6ರ ಪರಿಚಯವಿದೆ, ಆರೋಪಿತರ ಪರಿಚಯವಿಲ್ಲ, ನೋಡಿದ್ದೇನೆ. ದಿ: 16-03-2022 ರಂದು ಚಾಸಾ-1 ನನ್ನನ್ನು ಮತ್ತು ಚಾಸಾ-4 ರವರನ್ನು ಕಾಡವಾದಲ್ಲಿದ್ದ ತನ್ನ ಸರ್ವೆ ನಂ.124/2 ರ ಹೊಲಕ್ಕೆ ಕರೆದುಕೊಂಡು ಹೋಗಿದ್ದು, ಅಲ್ಲಿ ನಾವು ಮಾವಿನ ಗಿಡಕ್ಕೆ ಮಣ್ಣು ಹಾಕುತ್ತಿದ್ದಾಗ 1 ನೇ ಆರೋಪಿ ಬಂದು ಈ ಹೊಲ ನಮ್ಮದಿದೆ ಸೂಳೆ ಮಕ್ಕಳೆ, ರಂಡಿ ಮಕ್ಕಳೆ ಅಂತ ಅವಾಚ್ಯ ಶಬ್ದಗಳಿಂದ ಬೈದು, ಜೀವ ಬೆದರಿಕೆ ಹಾಕಿದ್ದರು. ಆ ಸಮಯದಲ್ಲಿ ಉಳಿದ ಆರೋಪಿತರು ಸಹ ಬಂದು, ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಈ ಸಂಬಂಧ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ. ಆರೋಪಿತರು ನ್ಯಾಯಾಲಯದಲ್ಲಿ ಹಾಜರಿದ್ದಾರೆ.

(ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಹಿರಿಯ ಸಸಅ ರವರು ಕೋರಿದ್ದು, ಅನುಮತಿ ನೀಡಲಾಯಿತು).

ಪಾಟೀ ಸವಾಲು: ಆರೋಪ ಪರ ಶ್ರೀ: ಬಿ. ಸಂಜುಕುಮಾರ ವಕೀಲರಿಂದ:

2. ಚಾಸಾ-1 ಮತ್ತು 4 ನನಗೆ 5 ವರ್ಷಗಳಿಂದ ಪರಿಚಯ. ನನ್ನ ಹಾಗೂ

ಚಾಸಾ-1 ರ ಮನೆ ಒಂದೇ ಕಡೆ ಇದೆ ಎಂದರೆ ಸರಿಯಲ್ಲ. ನಾವು ಕೊಮಟಿ ಜಾತಿಗೆ ಸೇರಿದವರು ಎಂದರೆ ಸರಿಯಲ್ಲ. ಚಾಸಾ-1 ನನಗೆ 3-30 ಗಂಟೆಗೆ ಕರೆ ಮಾಡಿದ್ದರು. ಫೋನ್ ನಂಬರ್ ನನಗೆ ಹೇಳಲಾಗುವುದಿಲ್ಲ. ನಾನು ನನ್ನ ಸ್ವಂತ ಪೈನಾನ್ಸ್ ಹೊಂದಿದ್ದೇನೆ. ಅದರ ಪ್ರೊಪರೈಟರ್ ನನ್ನ ಮಾವ. ಚಾಸಾ-1 ಬಿಲ್ಡರ್ ಇದ್ದು, ಅವರಿಗೆ ಬೀದರನ ಅಂಬೇಡ್ಕರ ಸರ್ಕಲ್ ಹಾಗೂ ಮೈಲೂರಿನಲ್ಲಿ ವೈನ್ ಶಾಪ್ ಇದೆ. ಚಾಸಾ-4 ವೈನ್ ಶಾಪ್ ನ ಮ್ಯಾನೆಂಜರ್ ಎಂದರೆ ಸರಿ. ನಾನು ಮೈಲೂರಿನ ವೈನ್ ಶಾಪನ ವ್ಯವಹಾರ ನೋಡಿಕೊಳ್ಳುತ್ತೇನೆ ಎಂದರೆ ಸರಿ.

3. ಸ್ಥಳದಲ್ಲಿ 10 ವರ್ಷಗಳಿಂದ ಮಾವಿನ ಮರಗಳಿದ್ದವು ಎಂದರೆ ಸರಿ. ಸದರಿ ಸರ್ವೆ ನಂ. ನಲ್ಲಿ ಮಾವಿನ ಗಿಡಗಳಿಲ್ಲ ಎಂದರೆ ಸರಿಯಲ್ಲ. ಹೈದ್ರಾಬಾದನಿಂದ ಚಾಸಾ-1 ಬಂದ ನಂತರ ನನ್ನ ಬಳಿಯೇ ವ್ಯವಹಾರ ಇಟ್ಟುಕೊಂಡಿದ್ದ ಎಂದರೆ ಸರಿಯಲ್ಲ. ಕಾಡವಾಡಕ್ಕೆ ನಾವು ಕಾರನಲ್ಲಿ ಹೋಗಿದ್ದೇವು, ಯಾವುದೇ ವಸ್ತುಗಳನ್ನು ತೆಗೆದುಕೊಂಡು ಹೋಗಿರಲಿಲ್ಲ. ನಾನು ಕಾಡವಾದ ಗ್ರಾಮಕ್ಕೆ ಹೋಗಿ ಮಾವಿನ ಗಿಡಗಳಿಗೆ ಮಣ್ಣು ಹಾಕುತ್ತಿದ್ದಾಗ ಆರೋಪಿತರು ಬಂದು ಅವಾಚ್ಯ ಶಬ್ದಗಳಿಂದ ಬೈದಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಹಿರಿಯ ಸಿವಿಲ್
ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾಯಿಕ
ದಂಡಾಧೀಕಾರಿಗಳು, ಬೀದರ